# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ಸಂಖ್ಯೆ:ತುವಿ:ಶೈವಿ:UG:2024-25/2167 ದಿನಾಂಕ:18.09.2024

## ಅಧಿಸೂಚನೆ-3

ವಿಷಯ: 2024-25 ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಸ್ನಾತಕ ಪದವಿ ಕೋರ್ಸುಗಳ ಪ್ರವೇಶಾತಿಯನ್ನು ವಿಸ್ತರಿಸಿರುವ ಕುರಿತು.

ಉಲ್ಲೇಖ : 1. ವಿವಿ ಪರಿಷ್ಕೃತ ಅಧಿಸೂಚನೆ ಪತ್ರ ಸಂಖ್ಯೆ: ತುವಿ:.ಶೈ.ವಿ:ಪ್ರವೇ.ಪ:2024-25/1833 ದಿ:13.08.2024

2. ವಿವಿ ಪರಿಷ್ಕೃತ ಅಧಿಸೂಚನೆ ಪತ್ರ ಸಂಖ್ಯೆ: ತುವಿ:.ಶೈ.ವಿ:ಪ್ರವೇ.ಪ:2024-25/1237 ದಿ:22.08.2024

3. ವಿವಿ ಪರಿಷ್ಕೃತ ಅಧಿಸೂಚನೆ ಪತ್ರ ಸಂಖ್ಯೆ: ತುವಿ:.ಶೈ.ವಿ:ಪ್ರವೇ.ಪ:2024-25/2028 ದಿ:03.09.2024

4. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:18.09.2024

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2024-25 ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ವಿವಿಧ ಸ್ನಾತಕ ಪದವಿ ತರಗತಿಗಳನ್ನು ದಿನಾಂಕ:27.09.2024 ರಿಂದ ಪ್ರಾರಂಭಿಸಲು ಉಲ್ಲೇಖ (01)ರ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಈಗಾಗಲೇ ವಿಶ್ವವಿದ್ಯಾನಿಲಯವು ಅಧಿಸೂಚಿಸಲಾಗಿದ್ದು, ಉಲ್ಲೇಖ (03)ರಲ್ಲಿ ದಂಡಶುಲ್ಕದೊಂದಿಗೆ ಕೊನೆಯ ದಿನಾಂಕವನ್ನು 13.09.2024ರವರೆಗೆ ನಿಗದಿಪಡಿಸಿ ಅಧಿಸೂಚಿಸಲಾಗಿತ್ತು.

ವಿವಿಧ ಕಾಲೇಜುಗಳ ಪ್ರಾಂಶುಪಾಲರುಗಳ ಕೋರಿಕೆಯನುಸಾರ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ **ದಿನಾಂಕ: 26.09.2024 ರ ವರೆಗೆ ರೂ.1000/-ಗಳ ದಂಡ ಶುಲ್ಕದೊಂದಿಗೆ** ವಿಸ್ತರಿಸಿ ಯುಯುಸಿಎಂಎಸ್ ಪೋರ್ಟಲ್‌ನ್ನು ಸಕ್ರಿಯಗೊಳಿಸಿ ಅಧಿಸೂಚಿಸಲಾಗಿದೆ.

| ಕ್ರ.ಸಂ | ವಿವರ | ನಿಗದಿಪಡಿಸಿರುವ ದಿನಾಂಕ |
|---|---|---|
| 1 | ಪ್ರಥಮ ವರ್ಷದ ಪದವಿಗೆ ರೂ.1000/- ದಂಡ ಶುಲ್ಕದೊಂದಿಗೆ ಪ್ರವೇಶಾತಿ ಕೊನೆಯ ದಿನಾಂಕ | 26.09.2024 |
| 2 | ಪ್ರಥಮ ವರ್ಷದ ವಿದ್ಯಾರ್ಥಿಗಳ ಪ್ರವೇಶಾನುಮೋದನೆಗಾಗಿ ಪಟ್ಟಿಯನ್ನು ವಿಶ್ವವಿದ್ಯಾನಿಲಯಲಕ್ಕೆ ಸಲ್ಲಿಸಬೇಕಾದ ಕೊನೆಯ ದಿನಾಂಕ (**Submit to University in UUCMS**) | 03.10.2024 |

ಈ ಅಧಿಸೂಚನೆಯಲ್ಲಿ ನಮೂದಿಸಿರುವ ದಿನಾಂಕಗಳೊಳಗಾಗಿ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರುಗಳು ಆಯಾಯ ಕೋರ್ಸುಗಳಿಗೆ ನಿಯಮಾನುಸಾರ ವಿದ್ಯಾರ್ಥಿಗಳ ಪ್ರವೇಶಾತಿ ಮಾಡಿಕೊಂಡು ಕ್ರಮವಹಿಸತಕ್ಕದ್ದು.

ಮುಂದುವರೆದಂತೆ ಉಲ್ಲೇಖ (01)ರಲ್ಲಿ ಅಧಿಸೂಚನೆಯಲ್ಲಿನ ಇನ್ನುಳಿದ ಅಂಶಗಳು ಯಥಾವತ್ತಾಗಿರುತ್ತವೆ.

ಆದೇಶದ ಮೇರೆಗೆ,

18/09/2024

ಉಪಕುಲಸಚಿವರು

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ

1. ಎಲ್ಲಾ ಪ್ರಾಂಶುಪಾಲರುಗಳು ಘಟಕ ಹಾಗೂ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು- ಎಲ್ಲಾ ಪ್ರಾಂಶುಪಾಲರುಗಳಿಗೆ ಇಂದೇ ಇ-ಮೂಲಕ ಕಳುಹಿಸುವುದು ಹಾಗೂ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.

ಪ್ರತಿಗಳು:

1. ಕುಲಸಚಿವರು (ಮೌಲ್ಯಮಾಪನ) ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ನೋಡಲ್ ಅಧಿಕಾರಿಗಳು, ಯುಯುಸಿಎಂಎಸ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಕಛೇರಿ ಪ್ರತಿ.